ಮುಂದೆ ಬರುವುದಕ್ಕೆ ಅವಕಾಶವಿಲ್ಲ. ಹಕ್ಕಿ ಒಂದೇ ರೆಕ್ಕೆಯ ಬಲದಿಂದ ಹಾರಲಾರದು. ಅದಕ್ಕೋಸ್ಕರವೇ ಶ್ರೀರಾಮಕೃಷ್ಣ ಅವತಾರದಲ್ಲಿ ಅವರು ಹೆಂಗಸನ್ನು ಗುರುವಾಗಿ ಸ್ವೀಕರಿಸಿದರು. ಅದಕ್ಕಾಗಿಯೇ ಅವರು ಸ್ತ್ರೀವೇಷದಲ್ಲಿ ಮತ್ತು ಸ್ತ್ರೀಭಾವದಲ್ಲಿ ದೇವರನ್ನು ಪೂಜಿಸಿದರು. ಸ್ತ್ರೀಯರ ಮಾತೃತ್ವದ ಆದರ್ಶವನ್ನು, ಅವರು ಜಗನ್ಮಯಿಯ ಪ್ರತಿನಿಧಿ ಎಂಬುದನ್ನು ಅವರು ಉಪದೇಶ ಮಾಡಿದರು. ಆದ ಕಾರಣ ನನ್ನ ಮೊದಲನೆಯ ಪ್ರಯತ್ನವೇ ಸ್ತ್ರೀಯರಿಗಾಗಿ ಒಂದು ಮಠವನ್ನು ಸ್ಥಾಪಿಸಬೇಕೆಂಬುದು. ಈ ಮಠದಿಂದ ಮೈತ್ರೇಯಿಯರಂತಹ ನಾರೀರತ್ನಗಳು ಹೊರಬೀಳುವುವು. ಅವರನ್ನು ಮೀರಿದವರೂ ಬರುವರು." ಅವರ ಈ ಕನಸು ಕಾಲಾನಂತರದಲ್ಲಿ ನನಸಾಯಿತು. ಪುರುಷರಿಗಾಗಿ ಇರುವ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನಂತೆ, ಸ್ತ್ರೀಯರಿಗಾಗಿ ಇರುವ 'ಶ್ರೀಶಾರದಾಮಠ' ವೆಂಬ ಸಂಸ್ಥೆ ಸ್ಥಾಪನೆಗೊಂಡಿತು ಹಾಗೂ ಅದರ ಶಾಖಾಕೇಂದ್ರಗಳು ಜಗತ್ತಿನಾದ್ಯಂತ ಕಾರ್ಯನಿರ್ವಹಿಸುತ್ತಿವೆ.

ಮತ್ತೊಂದು ಪತ್ರದಲ್ಲಿ, "ನನಗೆ ಈಗ ಎಲ್ಲ ಹೊಳೆಯುವುದು. ಸಹೋದರನೆ! **ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ** – 'ಎಲ್ಲಿ ಸ್ತ್ರೀಯರು ಪೂಜಿಸಲ್ಪಡುವರೋ ಅಲ್ಲಿ ದೇವತೆಗಳು ತೃಪ್ತರಾಗುವರು' ಎಂದು ಮನು ಹೇಳಿರುವನು. ನಾವು ಪಾಪಿ ಅಧಮರು. ನಮ್ಮ ಅಧೋಗತಿಗೆ ಕಾರಣ ಸ್ತ್ರೀಯರನ್ನು 'ತುಚ್ಛವಾದ ಕೀಟಗಳು' 'ನರಕಕ್ಕೆ ಮಾರ್ಗ' ಎಂದು ಹೇಳಿದುದು. ಅಬ್ಬ! ಸ್ವರ್ಗಕ್ಕೂ ನರಕಕ್ಕೂ ಇದೇ ಭೇದ" ಎಂದು ತಮ್ಮ ಕಳಕಳಿಯನ್ನು ತೋಡಿಕೊಂಡರು.

ಶ್ರೀಮಾತೆ ಶಾರದಾದೇವಿಯವರನ್ನು 'ಕಲಿಯುಗದ ಸೀತೆ' ಎಂದು ರಾಷ್ಟ್ರಕವಿ ಕುವೆಂಪುರವರು ತಮ್ಮ ಒಂದು ಪದ್ಯದಲ್ಲಿ ಬಣ್ಣಿಸಿದ್ದಾರೆ. ಅವರ ವ್ಯಕ್ತಿತ್ವವು ಭಾರತೀಯ ಸ್ತ್ರೀತ್ವದ ಕೀರ್ತಿಶಿಖರವೆಂದು ಸೋದರಿ ನಿವೇದಿತಾ ಹೇಳುತ್ತಿದ್ದರು. ಅವರು ಬರೆಯುತ್ತಾರೆ, "ಭಾರತೀಯ ನಾರಿಯರ ವಿಚಾರವಾಗಿ ಶ್ರೀ ರಾಮಕೃಷ್ಣರ ಕೊನೆಯ ಮಾತು ಶ್ರೀಮಾತೆಯವರು ಎಂದು ನನಗೆ ಯಾವಾಗಲೂ ಅನ್ನಿಸಿದೆ. ಆದರೆ ಅವರು ಹಳೆಯ ಪರಂಪರೆಯೊಂದರ ಅಂತವೋ ಅಥವಾ ಹೊಸ ಪರಂಪರೆಯೊಂದರ ಪ್ರಾರಂಭವೊ? ಅತ್ಯಂತ ಸರಳ ಸ್ವಭಾವದ ಹೆಂಗಸು ಕೂಡ ಹೊಂದಬಹುದಾದ ಮಾಧುರ್ಯ ಮತ್ತು ಪರಿಜ್ಞಾನಗಳನ್ನು ಅವರಲ್ಲಿ ಕಾಣಬಹುದು. ಇಷ್ಟಾದರೂ ನನ್ನ ಮಟ್ಟಿಗೆ ಅವರ ಮಾರ್ದವತೆ ಮತ್ತು ಮುಕ್ತ ಮನಸ್ಸು ಅವರ ಆಧ್ಯಾತ್ಮಿಕ ಸಿದ್ಧಿಯಷ್ಟೇ ಪರಮಾದ್ಭುತ. ಎಷ್ಟೇ ಹೊಸದಾದ ಹಾಗೂ ಜಟಿಲವಾದ ಪ್ರಶ್ನೆಗಳನ್ನು ಹಾಕಿದರೂ ಅವರು ಸ್ವಲ್ಪವೂ ಹಿಂದುಮುಂದು ನೋಡದೆ ಉದಾರವಾದ ಉತ್ತರಗಳನ್ನು ಕೊಡುತ್ತಿದ್ದರು. ಅವರ ಜೀವನವೇ ಒಂದು ನಿತ್ಯ ನೀರವ ಧ್ಯಾನ. ಅವರ ಇಡೀ ಅನುಭವ ಆಧ್ಯಾತ್ಮಿಕ ನಾಗರಿಕತೆಯದು. ಆದರೂ ಅವರು ಪ್ರತಿಯೊಂದು ಸವಾಲಿನ ಸರಿಸಮಕ್ಕೆ ಬರಬಲ್ಲವರಾಗಿದ್ದರು. ಅವರಿಗೆ ಸುತ್ತಲಿನ ಜನರಿಂದ ಏನಾದರೂ ತೊಂದರೆಯಾದರೆ? ಅದರ ಒಂದೇ ಸೂಚನೆ ಅವರ ವಿಲಕ್ಷಣ ಮೌನ ಮತ್ತು ಗಾಂಭೀರ್ಯ. ಅವರ ವಲಯವನ್ನು ಮೀರಿದ ಸಾಮಾಜಿಕ ಬೆಳವಣಿಗೆಗಳಿಂದಾದ ಯಾವುದಾದರೂ ಸಮಸ್ಯೆಯನ್ನೋ ತೊಂದರೆಯನ್ನೋ ಯಾರಾದರೂ ತಂದು ಅವರ ಮುಂದಿಟ್ಟರೆ, ಅವರು ತಮ್ಮ ಒಳನೋಟದಿಂದಾಗಿ ನೇರವಾಗಿ ಸಮಸ್ಯೆಯ ಆಳಕ್ಕೆ ಹೋಗುತ್ತಿದ್ದರು; ಪ್ರಶ್ನೆ ಕೇಳಿದರೆ ಕಣ್ತೆರೆಸಿ ಕಷ್ಟಗಳನ್ನು ಸರಿಯಾಗಿ ಅರಿತುಕೊಳ್ಳುವಂತೆ ಮಾಡುತ್ತಿದ್ದರು. ಸ್ವಲ್ಪ ಕಾಠಿಣ್ಯ ತೋರಬೇಕಾದ ಪ್ರಸಂಗ ಬಂದಾಗಲೂ ಅವರು ಹಿಂಜರಿಯುತ್ತಿರಲಿಲ್ಲ ..."

ಇಂದಿನ ಭಾರತೀಯ ಮಹಿಳೆಯರಿಗೆ ಜ್ಞಾನ, ಮತ್ತು ಸಾಂಸ್ಕೃತಿಕ ಸಾಧನೆಗೆ ಸಕಲ ಸೌಕರ್ಯಗಳೂ ಲಭ್ಯವಿವೆ ಹಾಗೂ ಸಾಮಾಜಿಕವಾಗಿ, ರಾಜಕೀಯವಾಗಿ ಅಭಿವೃದ್ಧಿಯ ಪ್ರತಿ ಹಂತದಲ್ಲಿಯೂ ಸಾಕಷ್ಟು ಅವಕಾಶಗಳು ಲಭ್ಯವಿವೆ. ಇದರಿಂದಾಗಿ ಅವರು ಆಂತರಿಕ ಶಕ್ತಿಯನ್ನು ಹೆಚ್ಚಿಸಿಕೊಂಡು ಸಂಯಮವನ್ನು ಸಾಧಿಸಿಕೊಂಡು ಸಂಪತ್ತು, ಕೀರ್ತಿ, ಸಂತೋಷ ಮತ್ತು ಅಧ್ಯಾತ್ಮಗಳನ್ನು ಸಾಧಿಸಬಹುದು. ಆದರೆ ಆಧುನಿಕ ಭಾರತದ ಬಹುಸಂಖ್ಯಾತ ಸುಶಿಕ್ಷಿತ ಮಹಿಳೆಯರು ತಮ್ಮ ಮನಸ್ಸು ಮತ್ತು ಹೃದಯಗಳನ್ನು ಸಂಸ್ಕಾರಗೊಳಿಸುವ ಜ್ಞಾನಕ್ಕಿಂತ ಹೆಚ್ಚಾಗಿ ಸಂಪತ್ತು, ಆರಾಮ ಮತ್ತು ವಿಲಾಸಗಳಲ್ಲಿ ಬಳಸುತ್ತಿದ್ದಾರೆಂಬುದು ಶೋಚನೀಯವಾದ ವಿಷಯ.

ಹೊರಗಿನ ವಿಶಾಲ ಸಾಮಾಜಿಕ ಕ್ಷೇತ್ರಗಳಲ್ಲಿ ತನ್ನ ಶಕ್ತಿಗಳನ್ನು ವಿಸ್ತರಿಸಬಯಸುವ ಮಹಿಳೆ ಮೊದಲು ತನ್ನ ಮನೆಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆಗಳನ್ನು ಸ್ಥಾಪಿಸಲು ಕಲಿತಿರಬೇಕು. ಆಧುನಿಕ ಭಾರತೀಯ ಮಹಿಳೆಗೆ ಸ್ತ್ರೀತ್ವದ ಆದರ್ಶವೆಂದರೆ ತನ್ನ ವ್ಯಕ್ತಿತ್ವದ ವೈಶಾಲ್ಯ ಹಾಗೂ ಅದರ ಶ್ರೀಮಂತಿಕೆಯನ್ನು ಮೈಗೂಡಿಸಿಕೊಳ್ಳುವುದು. ಇದರೊಂದಿಗೆ ಅವರು ತಮ್ಮ ಚಾರಿತ್ರ್ಯದ ಸ್ಥೈರ್ಯ, ಬಲವನ್ನು ವೃದ್ಧಿಸಿಕೊಳ್ಳಬೇಕು. ಪುರುಷರು ಸ್ತ್ರೀಯರನ್ನು ಜಗನ್ಮಾತೆಯ ಸ್ವರೂಪವೆಂಬ ದೃಷ್ಟಿಕೋನದಿಂದ ನೋಡಬೇಕು. ಸ್ತ್ರೀಯರು ಸಹ ಈ ದೈವೀಶಕ್ತಿಯ ಪ್ರಜ್ಞೆಯನ್ನು ಗಳಿಸಬೇಕು ಮತ್ತು ತಮ್ಮ ಜೀವನ ಹಾಗೂ ನಡತೆಗಳಲ್ಲಿ ಇದನ್ನು ಅಭಿವ್ಯಕ್ತಪಡಿಸಬೇಕು. ಇವುಗಳಿಂದ ಆಕೆಯ ಆಂತರಿಕ ಶಕ್ತಿಯು ಸುಲಭವಾಗಿ ಜಾಗೃತಗೊಳ್ಳುವುದು. ಇದರಿಂದ ಮಹಿಳೆ ಯಾವ ತೊಂದರೆಯೂ ಇಲ್ಲದೆ ಆಧುನಿಕ ಕಾಲದ ವಿವಿಧ ಕ್ಷೇತ್ರಗಳಲ್ಲಿ ದಕ್ಷ ಕಾರ್ಯನಿರ್ವಹಣೆಯೊಂದಿಗೆ ತನ್ನ ಜವಾಬ್ದಾರಿಯನ್ನು ನೇರವೇರಿಸಲು ಸಮರ್ಥಳಾಗುತ್ತಾಳೆ. ❋

ಸೂರ್ಯ ಜಗತ್ತಿಗೆ ಬೆಳಕನ್ನು ಕೊಡುವನು. ಆದರೆ ಒಂದು ಸಣ್ಣ ಮೋಡ ಸೂರ್ಯನನ್ನು ನಮಗೆ ಕಾಣದಂತೆ ಮಾಡುವುದು. ಅದರಂತೆಯೇ ಕೆಲಸಕ್ಕೆ ಬಾರದ ಮಾಯೆಯ ತೆರೆ ಸರ್ವವ್ಯಾಪಿಯಾದ, ಸರ್ವಸಾಕ್ಷಿಭೂತನಾದ, ಸಚ್ಚಿದಾನಂದ ಸ್ವರೂಪವನ್ನು ನಮಗೆ ಕಾಣಿಸದಂತೆ ತಡೆಯುವುದು.

–ಶ್ರೀರಾಮಕೃಷ್ಣ




# ಜೀವನ ಮಕರಂದ

('ಬದುಕಲು ಕಲಿಯಿರಿ' ಪುಸ್ತಕದ ಸಂಗ್ರಹ)

ಮೂಲ ಲೇಖಕರು : ಸ್ವಾಮಿ ಜಗದಾತ್ಮಾನಂದ   ಸಂಗ್ರಹ : ಡಾ. ಜಿ.ವಿ. ಕುಲಕರ್ಣಿ

ಅಧ್ಯಾಯ ಆರು

## ಬಿತ್ತಿದಂತೆ ಬೆಳೆ ಸುಳ್ಳಲ್ಲ

**"ನಾವು ಸದ್ಯ ಏನಾಗಿರುವೆವೋ ಅದು ನಮ್ಮ ಯೋಚನೆಯ ಫಲ. ಯೋಚನೆಗಳೇ ಈಗಿನ ನಮ್ಮ ಸ್ಥಿತಿಗೆ ತಳಹದಿ. ನಡೆನುಡಿಗಳಲ್ಲಿ ನಮ್ಮ ಯೋಚನೆ ಒಳ್ಳೆಯದಾಗಿದ್ದರೆ ನೆರಳಿನಂತೆ ಸುಖವು ಹಿಂಬಾಲಿಸುತ್ತದೆ; ನಮ್ಮ ಯೋಚನೆ ಕೆಟ್ಟದ್ದಾದರೆ ದುಃಖವು ಬೆಂಬತ್ತಿ ಬರುತ್ತದೆ."** **–ಗೌತಮ ಬುದ್ಧ**

**"ಪ್ರತಿಯೊಂದು ಕಾರ್ಯಕ್ಕೂ ಕಾರಣವಿರುವಂತೆ, ನಮ್ಮ ಸದ್ಯದ ಸ್ಥಿತಿಗೆ ನಮ್ಮ ಹಿಂದಿನ ಕರ್ಮಗಳೇ ಕಾರಣವಾದರೆ, ನಮ್ಮ ಇಂದಿನ ಕರ್ಮಗಳೇ ನಾಳಿನ ಸ್ಥಿತಿಯ ರೂವಾರಿಗಳು. ರೇಶ್ಮೆ ಹುಳು ತಾನೇ ತನ್ನ ಸುತ್ತ ಕೋಶವನ್ನು ನಿರ್ಮಿಸಿಕೊಂಡು ಬಂಧಿಯಾದಂತೆ, ನಮ್ಮ ಸಂಸ್ಕಾರಗಳ ಜಾಲವನ್ನು ನಾವೇ ನಮ್ಮ ಸುತ್ತ ಹೆಣೆದು ಅದರಿಂದ ಪಾರಾಗಲು ಸಾಧ್ಯವಾಗದೆ ಹೆಣಗಾಡುತ್ತಿದ್ದೇವೆ. ಕರ್ಮದ ಚಕ್ರ ಚಾಲನೆ ಮಾಡಿದ ನಾವೇ ಅದರಡಿ ಬಿದ್ದು ವಿಲವಿಲಿ ಒದ್ದಾಡುತ್ತಿದ್ದೇವೆ. ಆದರೆ ಒಂದು ಮಾತು – ನಮ್ಮ ಅಧೋಗತಿ ಮಾತ್ರವಲ್ಲ, ಉನ್ನತಿಯೂ ಕರ್ಮದಿಂದಲೇ ಸಾಧ್ಯ. ಮಾನವ ಸ್ವಾತಂತ್ರ್ಯದ ಅಭಿವ್ಯಕ್ತಿಯೇ ಕರ್ಮ."**

**–ಸ್ವಾಮಿ ವಿವೇಕಾನಂದ**

ಇತರ ಧರ್ಮೀಯರು ಈ 'ಕರ್ಮನಿಯಮ'ವನ್ನು ಒಪ್ಪುವುದಿಲ್ಲ. ಅವರ ಪ್ರಕಾರ ಮನುಷ್ಯನ ಹುಟ್ಟುಸಾವುಗಳ ನಡುವಣ ಈ ಬದುಕು ಪೂರ್ವನಿಯೋಜಿತವಲ್ಲ. ಕೇವಲ ಆಕಸ್ಮಿಕ. ಪುನರ್ಜನ್ಮವನ್ನು ಒಪ್ಪದ ಕ್ರೈಸ್ತ ಧರ್ಮದಲ್ಲಿ ಜನಿಸಿ, ಜನ್ಮಜನ್ಮಾಂತರದ ಹಿನ್ನೆಲೆಯ ವಿವರಗಳನ್ನೆಲ್ಲ ಬಿತ್ತರಿಸಿದ, ಇದೇ ವಿಜ್ಞಾನಯುಗದಲ್ಲಿ ಬಾಳಿಬದುಕಿದ ಎಡ್ಗರ್ ಕೇಸೀಯ ಜೀವನದ ಕೆಲವು ಘಟನೆಗಳ ಬಗ್ಗೆ ಗಮನ ಹರಿಸಬೇಕು. ಎಕ್ಸ್–ರೇ ದೃಷ್ಟಿಯ ಎಡ್ಗರ್ ಕೇಸೀ ಅತೀಂದ್ರಿಯ ಅನುಭವಗಳ ಅದ್ಭುತ ದಾಖಲೆಗಳನ್ನು ನಿರ್ಮಿಸಿದ.

'ಅತೀಂದ್ರಿಯಾನುಭವಗಳ ಅದ್ಭುತ ದಾಖಲೆಗಳು!'

'ಎಕ್ಸ್–ರೇ ದೃಷ್ಟಿಯ ಎಡ್ಗರ್ ಕೇಸೀ'

'ಸಂಸ್ಕೃತ ಭಾಷೆಯನ್ನು ಕೇಳಿಯೇ ಅರಿಯದ ವ್ಯಕ್ತಿ ಸುಪ್ತನಿದ್ರೆಯಲ್ಲಿ ಸಂಸ್ಕೃತ ಶಬ್ದವನ್ನು ಉಪಯೋಗಿಸಿದ!'

'ಜನ್ಮಾಂತರ ಮತ್ತು ಕರ್ಮಗಳನ್ನು ಕುರಿತು ಪಶ್ಚಿಮದ ಕ್ರೈಸ್ತ ದ್ರಷ್ಟಾರನ ಅಭೂತಪೂರ್ವ ಅನುಭವಗಳು!'

–ಮೇಲಿನ ವಿವಿಧ ಹೇಳಿಕೆಗಳು, ಎಡ್ಗರ್ ಕೇಸೀಯ ಅತೀಂದ್ರಿಯ ಶಕ್ತಿಯನ್ನು ಪರಿಚಯ ಮಾಡಿಕೊಡುತ್ತ ಅಮೆರಿಕದ ವಿವಿಧ ನಿಯತಕಾಲಿಕೆಗಳು ಆಗಿಂದಾಗ್ಗೆ ಪ್ರಕಟಿಸಿದ ಕೆಲವು ಲೇಖನಗಳ ಶಿರೋನಾಮೆಗಳು.

೧೯೧೦ರ ಅಕ್ಟೋಬರ್ ೧೯ರಂದು 'ನ್ಯೂಯಾರ್ಕ್ ಟೈಮ್ಸ್' ತನ್ನ ಭಾನುವಾರದ ಸಾಹಿತ್ಯ ವಿಭಾಗದಲ್ಲಿ ಒಂದು ವಿಸ್ಮಯಕಾರಿ ವರದಿಯನ್ನು ಪ್ರಕಟಿಸಿತು:

'ಸುಪ್ತನಿದ್ರೆಗೆ ಒಳಪಟ್ಟಾಗ ಡಾಕ್ಟರ್ ಆಗುವ ಕೇಸೀಯ ಸಾಮರ್ಥ್ಯ, ದೇಶದ ವೈದ್ಯರುಗಳನ್ನು ವಿಸ್ಮಯಗೊಳಿಸಿದ ಅಪೂರ್ವಶಕ್ತಿ.' ಮುಂದಿನ ವಿವರಣೆ ಹೀಗಿತ್ತು: 'ದೇಶದ ಪ್ರಖ್ಯಾತ ಡಾಕ್ಟರುಗಳು ಎಡ್ಗರ್ ಕೇಸೀಗೆ ಸಿದ್ಧಿಸಿದೆ ಎಂದು ಹೇಳಲಾಗಿರುವ ಅದ್ಭುತ ಶಕ್ತಿಯ ಬಗ್ಗೆ ಆಸಕ್ತರಾಗಿದ್ದಾರೆ. ವೈದ್ಯಕೀಯ ಶಾಸ್ತ್ರದ ಅಲ್ಪಸ್ವಲ್ಪ ತಿಳುವಳಿಕೆ ಇಲ್ಲದಿದ್ದರೂ, ಸುಪ್ತನಿದ್ರಾಸ್ಥಿತಿಯಲ್ಲಿ ಆತ ಅತ್ಯಂತ ಭೀಕರ ಮಾರಕ ರೋಗಗಳಿಗೆ ಕಾರಣವನ್ನು ಕಂಡುಹಿಡಿದು, ಔಷಧಿಗಳನ್ನೂ ಸೂಚಿಸುತ್ತಿದ್ದಾನೆ!'

ವ್ಯಕ್ತಿಯ ಹೆಸರು, ಊರು, ವಿಳಾಸ ಕೊಟ್ಟರೆ ಸಾಕು; ಸಂಬಂಧಪಟ್ಟ ವ್ಯಕ್ತಿ ನೆರೆಯ ಕೋಣೆಯಲ್ಲೇ ಇರಬಹುದು ಅಥವಾ ಸಹಸ್ರಾರು ಮೈಲು ದೂರದ ರಾಷ್ಟ್ರದಲ್ಲಿರಬಹುದು–ಸುಪ್ತನಿದ್ರೆಯ ಆಳದ ಸ್ತರಗಳಿಂದ ಕೇಸೀಯ ಅತೀಂದ್ರಿಯ ದೃಷ್ಟಿಗೆ ಎಲ್ಲವೂ ಗೋಚರವಾಗುತ್ತಿತ್ತು. ಸುಪ್ತನಿದ್ರೆಯಲ್ಲಿದ್ದುಕೊಂಡೇ ಆತ ಮಾತನಾಡಲು ತೊಡಗುತ್ತಿದ್ದ; ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುತ್ತಿದ್ದ. ತಾನು ಕಂಡರಿಯದ, ಕೇಳಿರದ ಊರಿನ ಪ್ರಾಕೃತಿಕ ಸೌಂದರ್ಯ, ಆ ಸಮಯದ ಹವೆ, ಸೂಚಿಸಲ್ಪಟ್ಟ ವ್ಯಕ್ತಿಯ ವೇಷಭೂಷಣ, ಒಳಹೊರಗುಗಳನ್ನು ಪ್ರತ್ಯಕ್ಷವಾಗಿ ಕಂಡಂತೆ ವಿವರಿಸುತ್ತಿದ್ದ.

೧೮೭೭ರಲ್ಲಿ ಸಂಯುಕ್ತ ಸಂಸ್ಥಾನದ ಕೆಂಟಕಿಯ ಹಾಫ್‌ಕಿನ್ಸ್‌ವಿಲ್ಲೆಯಲ್ಲಿ ಜನಿಸಿದ ಕೇಸೀಯ ತಂದೆತಾಯಿಗಳು ನಿರಕ್ಷರಿಗಳಾದ ರೈತರು. ಹಳ್ಳಿಯ ಶಾಲೆಯಲ್ಲಿ ೯ನೆಯ ತರಗತಿಯವರೆಗೆ ಓದಿದ ಕೇಸೀ ಏಸುಭಕ್ತನಾಗಿದ್ದ. ತಾನೊಬ್ಬ ಧರ್ಮೋಪದೇಶಕನಾಗಬೇಕೆಂದು, ರೋಗಗಳಿಂದ ಸಂತ್ರಸ್ತರಾದವರ ಸೇವೆಯನ್ನು ಮಾಡಬೇಕೆಂಬ ಬಯಕೆಯನ್ನು ಹೊಂದಿದ್ದ ಇವನು ಹೆಚ್ಚು ಓದಲು ಆಗದೆ, ಹಳ್ಳಿಯಲ್ಲಿನ ಕೆಲಸಕ್ಕೆ ಒಗ್ಗದೆ, ಪಟ್ಟಣ ಸೇರಿ ಅಲ್ಲಿ ಒಂದು ಪುಸ್ತಕದ ಅಂಗಡಿಯಲ್ಲಿ ಕೆಲಸಗಾರನಾಗಿ ಸೇರಿಕೊಂಡ. ಇಪ್ಪತ್ತೊಂದನೆಯ ವಯಸ್ಸಿನಲ್ಲಿ ಅವನ ಜೀವನದ ದಿಕ್ಕೇ ಬದಲಾಯಿತು. ಅವನು ಲೆರಿಂಜೈಟಿಸ್ ಎಂಬ ಗಂಟಲು ಬೇನೆಗೆ ತುತ್ತಾಗಿ, ತನ್ನ ಧ್ವನಿಯನ್ನು ಕಳೆದುಕೊಂಡು ಒಂದು ವರ್ಷ ಕೆಲಸ ಹುಡುಕುತ್ತ ಕಳೆದ. ಗಂಟಲಿಗೆ ಕೆಲಸವಿಲ್ಲದ ಒಬ್ಬ ಫೋಟೋಗ್ರಾಫರ್ ಆಗಲು ನಿಶ್ಚಯಿಸಿದ. ಆದರೆ ಆದದ್ದೇ ಬೇರೆ.